**ಜಿಲ್ಲಾ ಪಂಚಾಯತ್, ಉಡುಪಿ**

**ಜಿಲ್ಲಾ ಅಧಿಕಾರಿಯವರ ಕಚೇರಿ**
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಮೌಲಾನಾ ಅಜಾದ್ ಭವನ, ಶಿವಳ್ಳಿ,
ಅಲೆವೂರು ರಸ್ತೆ, ಮಣಿಪಾಲ– 576104
ಉಡುಪಿ ಜಿಲ್ಲೆ

ದೂರವಾಣಿ: 0820-2573596
ಇಮೇಲ್: domudupi@gmail.com
ಸಹಾಯವಾಣಿ : **82777 99990**
ಟ್ವಿಟರ್ : @minorityudupi
ಫೇಸ್‌ಬುಕ್ : facebook.com/domudupi

ಸಂಖ್ಯೆ: ಅಸಂಇಉ/ವಿ.ವೇ/ಸಿಆರ್- 56/2021-22

ದಿನಾಂಕ: 20.09.2021

## ಪ್ರಕಟಣೆ

## ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೆ ಅರ್ಜಿ ಅಹ್ವಾನ

ಕರ್ನಾಟಕ ಸರಕಾರ ಮತ್ತು ಭಾರತ ಸರಕಾರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಸರಕಾರಿ, ಅನುದಾನಿತ ಮತ್ತು ಮಾನ್ಯತೆ ಪಡೆದ ಕಾಲೇಜುಗಳಲ್ಲಿ ಕಲಿಯುತ್ತಿರುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ **ಮೆಟ್ರಿಕ್ ನಂತರದ ಹಾಗೂ ಮೆರಿಟ್-ಕಂ-ಮೀನ್ಸ್ ವಿದ್ಯಾರ್ಥಿವೇತನ** ಮಂಜೂರು ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಪಿ.ಯು.ಸಿ, ಪದವಿ ಸ್ನಾತಕೋತ್ತರ ಹಾಗೂ ಪಿ.ಹೆಚ್.ಡಿ.ಯವರೆಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ (Post Matric Scholarship) ಹಾಗೂ ತಾಂತ್ರಿಕ ಮತ್ತು ವಿವಿಧ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆರಿಟ್-ಕಂ-ಮೀನ್ಸ್ ವಿದ್ಯಾರ್ಥಿವೇತನಕ್ಕೆ (Merit-Cum-Means Scholarship) ಆನ್‌ಲೈನ್ ಮೂಲಕ **https://scholarships.gov.in**ನಲ್ಲಿ ಅರ್ಜಿಯನ್ನು ಸಲ್ಲಿಸುವುದು. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ರೂ 2.00 ಲಕ್ಷ ಹಾಗೂ ಮೆರಿಟ್-ಕಂ-ಮೀನ್ಸ್ ವಿದ್ಯಾರ್ಥಿವೇತನಕ್ಕೆ ರೂ 2.50 ಲಕ್ಷ ಒಳಗಿರಬೇಕು. ಮೆರಿಟ್-ಕಂ-ಮೀನ್ಸ್ ವಿದ್ಯಾರ್ಥಿವೇತನದ ವಿದ್ಯಾರ್ಥಿಗಳು ದಾಖಲೆಗಳನ್ನು ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ಹೊಸ/ನವೀಕೃತ ಅರ್ಜಿ ಸಲ್ಲಿಸಲು 30.11.2021 ಕೊನೆಯ ದಿನಾಂಕವಾಗಿರುತ್ತದೆ

ಉಡುಪಿ ಜಿಲ್ಲೆ ವ್ಯಾಪ್ತಿಗೆ ಬರುವ ಕಾಲೇಜಿನ ವಿದ್ಯಾರ್ಥಿಗಳು **ಮೆಟ್ರಿಕ್ ನಂತರದ ಹಾಗೂ ಮೆರಿಟ್-ಕಂ-ಮೀನ್ಸ್** ವಿದ್ಯಾರ್ಥಿವೇತನವನ್ನು ಆನ್‌ಲೈನ್‌ನಲ್ಲಿ ಸಲ್ಲಿಸಿದ ನಂತರ ಅರ್ಜಿಯನ್ನು ಪ್ರಿಂಟ್ ಪಡೆದು ನಮೂದಿಸಿದ ದಾಖಲೆಯೊಂದಿಗೆ ಪರಿಶೀಲನೆಗೆ ಕಾಲೇಜಿಗೆ ಸಲ್ಲಿಸುವುದು.

**ದಾಖಲೆಗಳು:**

1. ಅಂಕಪಟ್ಟಿ (ಹಿಂದಿನ ಸೆಮಿಸ್ಟರ್/ವಾರ್ಷಿಕ ಅಂಕಪಟ್ಟಿ)
2. ಪ್ರಸಕ್ತ ಸಾಲಿನ ಶುಲ್ಕ ಪಾವತಿಯ ರಶೀದಿ ಪ್ರತಿ (ಬೋಧನ ಹಾಗೂ ಪ್ರವೇಶ ಶುಲ್ಕ ಪ್ರತ್ಯೇಕವಾಗಿ ನಮೂದಿಸತಕ್ಕದ್ದು)
3. ತಹಶೀಲ್ದಾರ್ ಅವರಿಂದ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಪ್ರತಿ
4. ವ್ಯಾಸಂಗ ಪ್ರಮಾಣ ಪತ್ರ (**ಮೆರಿಟ್-ಕಂ-ಮೀನ್ಸ್ ವಿದ್ಯಾರ್ಥಿವೇತನಕ್ಕೆ ಮಾತ್ರ**)
5. ವಿದ್ಯಾರ್ಥಿಯ ಬ್ಯಾಂಕ್ ಪಾಸ್‌ಪುಸ್ತಕದ ಪ್ರತಿ
6. ಆಧಾರ್ ಕಾರ್ಡ್ ಪ್ರತಿ
7. ಪಾಸ್ ಪೋರ್ಟ್ ಸೈಜಿನ ಭಾವಚಿತ್ರ

**ವಿಶೇಷ ಸೂಚನೆ :**

***ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನದ ಪ್ರತಿಯನ್ನು ಅಲ್ಪಸಂಖ್ಯಾತರ ಕಛೇರಿಗೆ ಸಲ್ಲಿಸುವ ಅಗತ್ಯವಿಲ್ಲ***

ವಿದ್ಯಾರ್ಥಿವೇತನದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವೆಬ್‌ಸೈಟ್ **https://dom.karnataka.gov.in/udupi/public** ಅಥವಾ ಸಹಾಯವಾಣಿ ಸಂಖ್ಯೆ **8277799990**ಗೆ ಸಂಪರ್ಕಿಸಬಹುದು.

1. ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ
   ಮೌಲಾನಾ ಆಜಾದ್ ಭವನ,
   ಪಶು ಚಿಕಿತ್ಸಾಲಯದ ಹತ್ತಿರ,
   ಅಲೆವೂರು ರಸ್ತೆ, ಮಣಿಪಾಲ,
   **ಉಡುಪಿ ತಾಲೂಕು**-576104
   ದೂರವಾಣಿ : 0820-2574596
2. ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ.
   ತಾಲೂಕು ಕಂದಾಯ ನೌಕರರ ಕಟ್ಟಡ,
   ಹಳೆ ತಹಶಿಲ್ದಾರರ ಕಛೇರಿ ಹಿಂಭಾಗ,
   ಹೊಸ ಬಸ್ ಸ್ಟಾಂಡ್, ಕುಂದಾಪುರ,
   **ಕುಂದಾಪುರ ತಾಲೂಕು**-576201
   ದೂರವಾಣಿ : 08254-230370
3. ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ
   ನೆಲ ಮಹಡಿ, ಮಿನಿ ವಿಧಾನ ಸೌಧ,
   ತಾಲೂಕು ಕಛೇರಿ ಕಂಪೌಂಡ್,
   ಕಾರ್ಕಳ, **ಕಾರ್ಕಳ ತಾಲೂಕು**-574104
   ದೂರವಾಣಿ : 08258-231101

ಜಿಲ್ಲಾ ಅಧಿಕಾರಿ. 20/9/21
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಉಡುಪಿ